## #showyourroots ಈಗ ಜನಪ್ರಿಯ



ಬಿಳಿ ಕೂದಲು ಹಿಂದೆಂದಿಗಿಂತ ಈಗ ಜನಪ್ರಿಯವಾಗಿದೆ ಎನ್ನುತ್ತಾರೆ ಲ್ಯಾವೆಲ್ಲೆ ರಸ್ತೆಯ ಹೈ ಗ್ಲಾಸ್ ಸಲೂನ್‌ನ ಹೇರ್‌ಆರ್ಟ್ ತಜ್ಞೆ, ನೈನಾ ಗುಂಜೀಕರ್. ಲಾಕ್‌ಡೌನ್‌ನಲ್ಲಿ ಸಾಮಾಜಿಕ ಒತ್ತಡದಿಂದ ಎಷ್ಟೋ ಹೆಣ್ಣುಮಕ್ಕಳು ಹೊರಬಂದರು. ತಮ್ಮ ಸಹಜ ಕೂದಲನ್ನು ಕಪ್ಪು ಬಣ್ಣದಿಂದ ಮುಚ್ಚಿಕೊಳ್ಳಬೇಕೆಂಬ ಅನಿವಾರ್ಯ ಇಲ್ಲವಾಯಿತು. #showyourroots ಎಲ್ಲೆಡೆ ಹರಿದಾಡಿತು. ಜನಪ್ರಿಯವಾಯಿತು.

ಸಹಜ ಬಿಳಿ ಕೂದಲು ಸೌಂದರ್ಯದ ಸಂಕೇತ ಎನ್ನುವುದು ಒಪ್ಪಿತವಾಯಿತು. ನಮ್ಮ ಸಲೂನ್‌ನಲ್ಲಿ ಅಸಂಖ್ಯ ಮಹಿಳೆಯರಿಗೆ ಕಪ್ಪು ಬಣ್ಣ ಹಚ್ಚುತ್ತಿದ್ದೆವು. ಕೋವಿಡ್ ಲಾಕ್‌ಡೌನ್ ನಂತರ ಸಂಪೂರ್ಣ ಬಿಳಿ ಬಣ್ಣ ಹಾಕಿಸಿಕೊಳ್ಳುವವರು ಅಥವಾ ಅಲ್ಲಲ್ಲಿ ಬೆಳ್ಳಿ ಕೂದಲುಗಳು ಕಾಣಿಸಿಕೊಳ್ಳುವಂತೆ ಮಾಡುವವರೂ ಹೆಚ್ಚಾಗಿದ್ದಾರೆ. ಬೆಂಗಳೂರಿನ ಮಿಲೇನಿಯಲ್‌ಗಳು ಪ್ರಯೋಗಶೀಲರಾಗಿ ಖುಷಿಯಿಂದ ಇರಲು ಪ್ರಯತ್ನಿಸುವ ಬಣ್ಣಗಳಲ್ಲಿ ಬಿಳಿಯೂ ಒಂದೆನ್ನುವುದು ಸತ್ಯ ಎನ್ನುತ್ತಾರೆ ನೈನಾ.

ಹುಟ್ಟಬೇಕು ಎಲ್ಲ ಅವರೇ ಬರೆದಿರೋದು' ಎಂದು ನಿಸ್ಸಂಕೋಚವಾಗಿ ಅವನು ಹೇಳುತ್ತಾ ಹೊರನಡೆದ.

ಹೀಗೆ, ಕುವೆಂಪು ಕೇಶವಿನ್ಯಾಸ ರೂಪುಗೊಳ್ಳುತ್ತಿದ್ದ ಕಾಲಘಟ್ಟದಲ್ಲಿಯೇ ತಮಿಳು ನಟ ಅಜಿತ್ ಬಿಳಿ ಕೂದಲಿನಿಂದಲೇ ಹೇಗೆ ತನ್ನ ಮಾರುಕಟ್ಟೆ ವಿಸ್ತರಿಸಿಕೊಂಡರೆನ್ನುವ ಚರ್ಚೆಯೂ ಹುಟ್ಟಿತು. ಮಹೇಂದ್ರ ಸಿಂಗ್ ಧೋನಿ ಸೈಡ್ ಬರ್ನ್‌ನ ಮಿರಮಿರ ಬೆಳ್ಳಿಕೂದಲು ಕೂಡ ಫ್ಯಾಷನ್ ಸ್ಟೇಟ್‌ಮೆಂಟ್ ಆದದ್ದನ್ನು ಮತ್ತೊಬ್ಬರು ಮೆಲುಕು ಹಾಕಿದರು. ಕುಮಾರ ಸಂಗಕ್ಕಾರ ಇತ್ತೀಚೆಗೆ ಇತ್ತಿತ್ತಲಾಗಿ ಬಿಳಿ ಕೂದಲಿನಲ್ಲೇ ಚೆನ್ನಾಗಿ ಕಾಣ್ತಾರಲ್ವಾ ಅಂದರು. ಆ ರಣತುಂಗ ಕೂಡ ಬಣ್ಣ ಹಚ್ಚೊಲ್ಲ ಎಂದು ಇನ್ನೊಬ್ಬ ಕ್ರಿಕೆಟ್ ಅಭಿಮಾನಿ ಉದಾಹರಣೆ ಸೇರಿಸಿದರು.

ಸಲೂನಿನವನಿಗೆ ಈ ರೀತಿಯ ಬೇಡಿಕೆಗಳು ಹೊಸತೇನಲ್ಲ. ಕೆಲವು ವರ್ಷಗಳಿಂದೀಚೆಗೆ ಬಿಳಿ ಕೂದಲು ಹಾಗೂ ಬಿಳಿ–ಕಪ್ಪು ಬೆರೆತ ಸಾಲ್ಟ್ ಅಂಡ್ ಪೆಪ್ಪರ್ ಕೇಶವಿನ್ಯಾಸ ಟ್ರೆಂಡಿ ಆಗುತ್ತಿರುವುದೇ ಇದಕ್ಕೆ ಕಾರಣ.

ಈ ವರ್ಷ ಮಾರ್ಚ್‌ನಲ್ಲಿ ವೋಗ್ ಫ್ಯಾಷನ್ ಮಾಸ ನಡೆಯಿತು. ಆಗ ಲಂಡನ್‌ನಿಂದ ಪ್ಯಾರಿಸ್‌ವರೆಗೂ ಬಿಳಿ ಕೂದಲಿನ ಫ್ಯಾಷನ್ ಟ್ರೆಂಡ್ ಆಗುತ್ತಿದೆ ಎನ್ನುವುದು ವೇದ್ಯವಾಯಿತು, 'ಸ್ಟ್ರೀಟ್ ಸ್ಟೈಲ್' ಎಂಬ ಪ್ರದರ್ಶನದಲ್ಲಿ ಧವಳಕೇಶಿಗಳೆಲ್ಲ ಮುಖದ ಮೇಲೆ ನಗೆ ತುಳುಕಿಸುತ್ತಾ ವೋಗ್ ಫ್ಯಾಷನ್ ಮಾಸದಲ್ಲಿ ನಡೆದಾಡಿದ್ದೂ ಒಂದು ಸುದ್ದಿ. ಸಾರಾ ಹ್ಯಾರಿಸ್ ಎಂಬ ರೂಪದರ್ಶಿ ಟೋನಲ್ ಶೇಡ್‌ಗಳಿಂದ ಕೆಲವೇ ವರ್ಷಗಳ ಹಿಂದೆ ಗುರುತಾಗಿದ್ದವಳು. ಅವಳು ಕೂಡ ಬಿಳಿ ಕೂದಲನ್ನು ತೋರುತ್ತಾ ಖುಷಿಪಟ್ಟಿದ್ದನ್ನು ಫ್ಯಾಷನ್ ಮಾಧ್ಯಮಗಳು ಉಲ್ಲೇಖಿಸಿ ಬರೆದಿದ್ದವು.

ಬೆಂಗಳೂರಿನ ಕೇಶವಿನ್ಯಾಸ ತಜ್ಞ ಇಂದಿರೇಶ್ ಬಿಳಿಕೂದಲಿನ ಫ್ಯಾಷನ್ ಈಗಲೂ ಟ್ರೆಂಡಿ ಎಂದು ಅನುಮೋದಿಸುತ್ತಾರೆ. 'ನಮ್ಮ ಬಳಿಗೆ ಬರುವ ಶೇ. 20ರಷ್ಟು ಯುವಕರು ಬಿಳಿ ಕೂದಲನ್ನು ಬಯಸುತ್ತಾರೆ. ಕೆಲವರು ಸಾಲ್ಟ್ ಅಂಡ್ ಪೆಪ್ಪರ್ ಕೂಡ ಇಷ್ಟಪಡುತ್ತಾರೆ. ಎರಡೂ ಬಣ್ಣ ಹಚ್ಚುವ ಉತ್ತಮ ಉತ್ಪನ್ನಗಳಿಗೆ ಈಗ ಒಳ್ಳೆಯ ಮಾರುಕಟ್ಟೆ ಇದೆ' ಎಂದು ಅವರು ಹೇಳುತ್ತಾರೆ.

ಕೋವಿಡ್ ಬಂದಾಗ ತಿಂಗಳುಗಟ್ಟಲೆ ಜನ ಸಲೂನ್‌ಗೆ ಬರಲು ಆಗಿರಲಿಲ್ಲ. ಆಗ ಬಣ್ಣ ಹಚ್ಚಿಸಿಕೊಳ್ಳುವುದು ಹಾಗಿರಲಿ, ಕೂದಲನ್ನು ಕಟ್ ಮಾಡಿಸಿಕೊಳ್ಳುವುದೂ ಕಷ್ಟ ಎನ್ನುವ ಸ್ಥಿತಿ. ಆಗ ತಮ್ಮ ಸಹಜ ಕೂದಲನ್ನೇ ಎಷ್ಟೋ ಜನರಿಗೆ ನೋಡಲು ಸಾಧ್ಯವಾಯಿತು. ಬಿಳಿ ಅಥವಾ ಸಾಲ್ಟ್ ಅಂಡ್ ಪೆಪ್ಪರ್‌ನ ಸಹಜ ಕೂದಲನ್ನು ಆಪ್ತೇಷ್ಟರು ಮೆಚ್ಚಿರುವ ಉದಾಹರಣೆಗಳೂ ಇವೆ. ಕೋವಿಡ್ ನಂತರ ಜೀವನಶೈಲಿ ಬದಲಾಗಿದೆ. ತಮ್ಮ ಗ್ರಾಹಕರಲ್ಲೇ ಶೇ. 20ರಷ್ಟು ಜನ ಕೂದಲಿಗೆ ಕಪ್ಪು ಬಣ್ಣ ಹಚ್ಚಿಸಿಕೊಳ್ಳುವುದನ್ನು ಬಿಟ್ಟಿದ್ದಾರೆ ಎಂಬ ಇಂದಿರೇಶ್ ಅನುಭವವೇ ಧವಳಕೇಶಿಗಳ ಸಂಖ್ಯಾ ಹೆಚ್ಚಳಕ್ಕೆ ಕಾರಣವನ್ನು ತಿಳಿಸುತ್ತದೆ.

ಮಹಿಳೆಯರು ಕೂಡ ಈಗೀಗ ಧವಳಕೇಶದ ಹೆಚ್ಚುಗಾರಿಕೆಯನ್ನು ಅನುಭವಿಸತೊಡಗಿದ್ದಾರೆ. 1990ರ ದಶಕದಲ್ಲಿ ಜಾಹೀರಾತೊಂದರಲ್ಲಿ ಹುಡುಗನೊಬ್ಬ ಮಧ್ಯಮವಯಸ್ಕ ಮಹಿಳೆಯನ್ನು ಆಂಟಿ ಎಂದು ಸಂಬೋಧಿಸಿದ್ದೇ ಅವಳಲ್ಲಿ ಕಂಪನ ಉಂಟಾಗುವುದನ್ನು ತೋರಿಸಿತ್ತು. ಆಮೇಲೆ ಬಿಳಿ ಕೂದಲಿಗೆ ಬಣ್ಣ ಹಚ್ಚಿ, ಅವಳು ಹರೆಯ ತುಳುಕಿಸುವುದನ್ನು ಆ ಜಾಹೀರಾತು ತೋರಿತ್ತು. ಈಗ ಪರಿಸ್ಥಿತಿ ಹಾಗಿಲ್ಲ. ಸಹಜ ಸೌಂದರ್ಯ ಬಯಸುವವರ ಸಂಖ್ಯೆ ಹೆಚ್ಚಾಗುತ್ತಿದೆ.



ಪುರುಷರು ಬಿಳಿ ಕೂದಲು ಬಿಟ್ಟಾಗ ಅವರನ್ನು 'ಸಿಲ್ವರ್ ಫಾಕ್ಸ್' (ಬೆಳ್ಳಿ ತೋಳ) ಎಂದು ಸೆಕ್ಸಿಸಂ ಪರಿಭಾಷೆಯಲ್ಲಿ ಹೇಳುತ್ತಿದ್ದ ಜನ, ಮಹಿಳೆಯ ಬಿಳಿಕೂದಲನ್ನು ಮುದಿತನದ ಸಂಕೇತ ಎನ್ನುವಂತೆ ಮೂದಲಿಸುತ್ತಿದ್ದರು. ಈಗ ಕಾಲ ಹಾಗಿಲ್ಲ. ಗ್ರಾಂಬ್ರೆ ಎಂಬ ಇನ್‌ಸ್ಟಾಗ್ರಾಂ ಹ್ಯಾಂಡಲ್‌ನಲ್ಲಿ ಬಿಳಿ ಕೂದಲು ಹೊಂದುತ್ತಿರುವವರೇ ಹೆಮ್ಮೆಯಿಂದ ಫೋಟೊಗಳನ್ನು ಹಾಕುವ ಅಭಿಯಾನ ನಡೆಯಿತು. ಅದನ್ನೊಂದು ಕ್ರಾಂತಿಕಾರಿ ಸಂಭ್ರಮಾಚರಣೆ ಎಂದೇ ಸಾಮಾಜಿಕ ಜಾಲತಾಣ ಬಣ್ಣಿಸಿತು. ಸುಮಾರು 91 ಸಾವಿರ ಆ ಇನ್‌ಸ್ಟಾ ಅಕೌಂಟ್ ಅನ್ನು ಫಾಲೊ ಮಾಡಿದರು. ಝೊಸಿಯಾ ಮೆಮೆಟ್, ರಿಹಾನ್ನಾ ತರಹದ ಸೆಲೆಬ್ರಿಟಿಗಳು ಕೂಡ ಧವಳಕೇಶದ ಸಾಧ್ಯತೆಗಳನ್ನು ಅನಾವರಣಗೊಳಿಸಿದ ಮೇಲೆ ಅದೊಂದು ಸ್ತ್ರೀ ಸಂಕೇತ ಬದಲಾವಣೆಯ ಅಭಿಯಾನವೇ ಆದದ್ದು ನಿಜ.

ನಟಿ ರತ್ನಾ ಪಾಠಕ್ ಶಾ, ಮಕ್ಕಳ ಹಕ್ಕುಗಳ ವಕೀಲೆ ಲುಬೈನಾ ಪ್ಲಂಬರ್ ತಮ್ಮ ಬಿಳಿಕೂದಲಿನ ಪ್ರೀತಿಯ ಕುರಿತು ಸಾಮಾಜಿಕ ಜಾಲತಾಣಗಳಿಗೆ ಸುದೀರ್ಘ ಸಂದರ್ಶನಗಳನ್ನೂ ನೀಡಿದ್ದಾರೆ.

'ಬಿಳಿ ಕೂದಲು ಹೆಕ್ಕಿ ಕತ್ತರಿಸೋದ್ಯಾಕಾ... ಕತ್ತರಿಸಿ ಚಿಕ್ಕ ಪ್ಯಾಕಾ' ಎಂಬ ಜಾಹೀರಾತು ಕೂಡ ಇತ್ತಿತ್ತಲಾಗಿ ಕಾಣಿಸುತ್ತಿಲ್ಲ. ಕೋವಿಡ್ ನಂತರ ಮುಕ್ತಿಮಾರ್ಗದಲ್ಲಿ ನಡೆಯತೊಡಗಿರುವ ಮನಸ್ಸುಗಳಿಗೆ ಧವಳಕೇಶವೂ ಒಂದು ದಿವ್ಯ ಸಂಕೇತವಾಗಿರಲಿಕ್ಕೆ ಸಾಕು.



ರತ್ನಾ ಪಾಠಕ್ ಶಾ